ತಿ ವಿಳಾಸ ಯೂನಿರಿಜ್
ದೂರವಾಣಿ ಸಂಖ್ಯೆ: 2419277/2419210
ಫ್ಯಾಕ್ಸ್: 0821-3419363/24193011

e-mail registrar@Uni-mysore-ac-in
www.uni-mysore-ac-in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ಸಂಖ್ಯೆ: ಯುಎ-3/26/2021-2022

ದಿನಾಂಕ: 25-08-2021

**"ಪ್ರಾಮಾಣಿಕ ಅಂಚೆ ಮೂಲಕ"**

ಮಾನ್ಯ ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 13-07-2021ರಂದು ನಡೆದ ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಯ ನಡವಳಿಯನ್ನು ಕಳುಹಿಸುವ ಬಗ್ಗೆ.

* * * * *

ದಿನಾಂಕ: 13-07-2021ರಂದು ಬೆಳಗ್ಗೆ 11-30 ಗಂಟೆಗೆ, ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಯ ನಡವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ, ನಡವಳಿಯಲ್ಲಿ ಹೇಳಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡವಳಿಗಳನ್ನು ಕಳುಹಿಸಿದ ದಿನಾಂಕದಿಂದ 21 ದಿನಗಳ ಒಳಗಾಗಿ ಆಕ್ಷೇಪಣೆ ಬಾರದಿದ್ದಲ್ಲಿ, ನಡವಳಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ. ಆದುದರಿಂದ, ನಡವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ, ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ದಿನಾಂಕ 14-09-2021ರ ಒಳಗಾಗಿ, ಉಪಕುಲಸಚಿವ(ಪ್ರಾಧಿಕಾರ) ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್‌ಭವನ, ಮೈಸೂರು-570 005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ

Lingaraj 25/8/2021

ಉಪಕುಲಸಚಿವ(ಪ್ರಾಧಿಕಾರ)

25/08

ಪ್ರತಿ:

1. ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು - ಗೌರವಾನ್ವಿತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು -01
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು -5
4. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-05
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು-06
6. ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-05
7. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಕಛೇರಿ ಪ್ರತಿ.

**AC Forwarding letter**

# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ದಿನಾಂಕ 13-07-2021ರ ಮಂಗಳವಾರದಂದು ಪೂರ್ವಾಹ್ನ 11.30 ಗಂಟೆಗೆ ನಡೆದ ಶಿಕ್ಷಣ ಮಂಡಳಿಯ ಮೊದಲನೇ ಸಾಮಾನ್ಯ ಸಭೆಯ ನಡವಳಿಗಳು.**

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು**

| | | |
|---|---|---|
| 1. | ಪ್ರೊ. ಜಿ.ಹೇಮಂತಕುಮಾರ್, ಕುಲಪತಿಗಳು | ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ, ಬೆಂಗಳೂರು ಇವರ ಪರವಾಗಿ<br>ಡಾ. ಅಪ್ಪಾಜಿಗೌಡ, ಜಂಟಿ ನಿರ್ದೇಶಕರು (ಪ್ರಭಾರ),<br>ಕಾಲೇಜು ಶಿಕ್ಷಣ ಇಲಾಖೆ, ಮೈಸೂರು<br>ಪ್ರಾದೇಶಿಕ ಕಛೇರಿ, ಮೈಸೂರು ಇವರ ಪರವಾಗಿ | ಸದಸ್ಯರು |
| 3. | ಶ್ರೀ ಸಿ.ಎಸ್.ನಿರಂಜನ ಕುಮಾರ್, ಎಂ.ಎಲ್.ಎ | ಸದಸ್ಯರು |
| 4. | ಶ್ರೀ ಆರ್.ಧರ್ಮಸೇನ, ಎಂ.ಎಲ್.ಸಿ | ಸದಸ್ಯರು |
| 5. | ಡಾ. ಕೆ.ವಿ.ಸುರೇಶ್ | ಸದಸ್ಯರು |
| 6. | ಶ್ರೀ ದಿನೇಶ್ ಎಂ ಗಾವಂಕರ್ | ಸದಸ್ಯರು |
| 7. | ಡಾ. ಬಿ.ಎನ್.ಆಶಾ | ಸದಸ್ಯರು |
| 8. | ಡಾ. ಎಂ.ಶಾರದ | ಸದಸ್ಯರು |
| 9. | ಡಾ. ಜಿ.ಗೋವಿಂದರಾಜು | ಸದಸ್ಯರು |
| 10. | ಶ್ರೀಮತಿ ನಾಗರತ್ನಮ್ಮ | ಸದಸ್ಯರು |
| 11. | ಡಾ. ಜೆ.ಎನ್.ವೆಂಕಟೇಶ್ | ಸದಸ್ಯರು |
| 12. | ಡಾ. ಬಿ.ರಾಜಣ್ಣ | ಸದಸ್ಯರು |
| 13. | ಡಾ. ಹೆಚ್.ಎಂ.ನಿರ್ಮಲ | ಸದಸ್ಯರು |
| 14. | ಡಾ. ವೆಂಕಟೇಶಯ್ಯ | ಸದಸ್ಯರು |
| 15. | ಶ್ರೀ ಎಸ್.ನಂದೀಶ್ | ಸದಸ್ಯರು |
| 16. | ಶ್ರೀ ಟಿ.ನಾಗರಾಜು | ಸದಸ್ಯರು |
| 17. | ಡಾ. ಎಸ್.ಟಿ.ಪ್ರಶಾಂತ್ | ಸದಸ್ಯರು |
| 18. | ಪ್ರೊ. ಕೆ.ವಿ.ಅಯ್ಯಣ್ಣ | ಸದಸ್ಯರು |
| 19. | ಡಾ. ಭಾಗ್ಯಲಕ್ಷ್ಮಿ | ಸದಸ್ಯರು |
| 20. | ಡಾ. ಬಿಂದು ಅನಿಲ್ ಥಾಮಸ್ | ಸದಸ್ಯರು |
| 21. | ಶ್ರೀ ಎಂ.ಶಿವಕುಮಾರ್ | ಸದಸ್ಯರು |
| 22. | ಶ್ರೀ ಎಂ.ಸಿ.ರಾಜಶೇಖರ್ | ಸದಸ್ಯರು |
| 23. | ಪ್ರೊ. ಎಸ್.ಆರ್.ನಿರಂಜನ | ಸದಸ್ಯರು |
| 24. | ಪ್ರೊ. ಮುಜಾಫರ್ ಹೆಚ್ ಅಸ್ಸಾದಿ | ಸದಸ್ಯರು |
| 25. | ಪ್ರೊ. ಎಂ.ಜಿ.ಮಂಜುನಾಥ್ | ಸದಸ್ಯರು |
| 26. | ಪ್ರೊ. ರಮೇಶ್ | ಸದಸ್ಯರು |
| 27. | ಪ್ರೊ. ನಿಂಗಮ್ಮ ಸಿ ಬೆಟ್ಸೂರ್ | ಸದಸ್ಯರು |

28. ಪ್ರೊ. ಹೆಚ್.ರಾಜಶೇಖರ್ ಸದಸ್ಯರು
29. ಪ್ರೊ. ಎಂ.ಎಸ್.ಶೇಖರ್ ಸದಸ್ಯರು
30. ಪ್ರೊ. ಜಿ.ಆರ್.ಜನಾರ್ಧನ ಸದಸ್ಯರು
31. ಡಾ. ಸರಸ್ವತಿ, ಗ್ರಂಥಪಾಲಕರು (ಪ್ರಭಾರ) ಸದಸ್ಯರು
32. ಪ್ರೊ. ಎನ್.ಕೆ.ಲೋಕನಾಥ್, ನಿರ್ದೇಶಕರು, ಪಿ.ಎಂ.ಇ.ಬಿ. ಸದಸ್ಯರು
33. ಪ್ರೊ. ಆರ್.ಶಿವಪ್ಪ, ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ ಸದಸ್ಯರು
34. ಡಾ. ಕೃಷ್ಣಯ್ಯ, ನಿರ್ದೇಶಕರು (ಪ್ರಭಾರ), ದೈಹಿಕ ಶಿಕ್ಷಣ ಸದಸ್ಯರು
35. ಪ್ರೊ. ಎ.ಪಿ.ಜ್ಞಾನಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) ಸದಸ್ಯರು
36. ಪ್ರೊ. ಆರ್.ಶಿವಪ್ಪ, ಕುಲಸಚಿವರು ಸದಸ್ಯ ಕಾರ್ಯದರ್ಶಿ

**<u>ವಿಶೇಷ ಆಹ್ವಾನಿತರು</u>**

38. ಪ್ರೊ. ಜಿ.ವೆಂಕಟೇಶ್‌ಕುಮಾರ್

**<u>ಸಭೆಯಲ್ಲಿ ಗೈರುಹಾಜರಾಗಿರುವವರು:</u>**

39. ನಿರ್ದೇಶಕರು, ತಾಂತ್ರಿಕ ಶಿಕ್ಷಣ, ಬೆಂಗಳೂರು
37. ಡಾ. ಎಸ್.ಟಿ.ರಾಮಚಂದ್ರ, ನಿರ್ದೇಶಕರು (ಪ್ರಭಾರ),
ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ
40. ಶ್ರೀ ಪ್ರೀತಂ ಜೆ ಗೌಡ, ವಿಧಾನ ಸಭಾ ಸದಸ್ಯರು
41. ಶ್ರೀ ಎಂ.ಶ್ರೀನಿವಾಸ್, ವಿಧಾನ ಸಭಾ ಸದಸ್ಯರು
42. ಶ್ರೀ ಎಲ್.ನಾಗೇಂದ್ರ, ವಿಧಾನ ಸಭಾ ಸದಸ್ಯರು
43. ಶ್ರೀ ಎಂ.ಎ.ಗೋಪಾಲಸ್ವಾಮಿ, ವಿಧಾನ ಪರಿಷತ್ ಸದಸ್ಯರು
44. ಡಾ. ಭಾಗ್ಯಲಕ್ಷ್ಮಿ
45. ಶ್ರೀ ಎಂ.ಪಿ.ಶಶಿಕುಮಾರ್
46. ಪ್ರೊ. ಟಿ.ಎಸ್.ದೇವರಾಜ, ಹಣಕಾಸು ಅಧಿಕಾರಿಗಳು

ಮೊದಲಿಗೆ ಮಾನ್ಯ ಕುಲಸಚಿವರು ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಗೆ ಆಗಮಿಸಿರುವ ಎಲ್ಲಾ ಸದಸ್ಯರುಗಳನ್ನೂ ಹಾಗೂ ಪತ್ರಿಕಾ ಮಾಧ್ಯಮವರುಗಳನ್ನೂ ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಸಭೆಯು ಪ್ರಾರಂಭಿಸುವ ಮೊದಲು ಈ ಕೆಳಗೆ ನಮೂದಿಸಿರುವವರ ನಿಧನಕ್ಕೆ ಸಂತಾಪ ಸೂಚಿಸಿ ಎರಡು ನಿಮಿಷ ಮೌನವನ್ನಾಚರಿಸಲಾಯಿತು.

1. ಪ್ರೊ. ಪಿ. ಸಲ್ವದಾಸ್. ಮೈಸೂರು ವಿಶ್ವವಿದ್ಯಾನಿಲಯದ ಮೊದಲ ಮಹಿಳಾ ಕುಲಪತಿ (ವಿಶ್ರಾಂತ), ಹಾಗೂ ಮಾಜಿ ರಾಜ್ಯ ಸಭಾ ಸದಸ್ಯರು.
2. ಡಾ. ಎನ್. ನಿಂಗಯ್ಯ, ಹಿರಿಯ ಪ್ರಾಧ್ಯಾಪಕರು (ವಿಶ್ರಾಂತ) ಮಾನವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಹಾಗೂ ಮಾಜಿ ಶಿಕ್ಷಣ ಮಂಡಳಿ ಸದಸ್ಯರು.
3. ಶ್ರೀ ಹೆಚ್. ಎಸ್. ದೊರೆಸ್ವಾಮಿ, ಹಿರಿಯ ಸ್ವಾತಂತ್ರ ಹೋರಾಟಗಾರರು.
4. ಡಾ. ಸಿದ್ಧಲಿಂಗಯ್ಯ, ಖ್ಯಾತ ಸಾಹಿತಿಗಳು.
5. ಶ್ರೀ ಆರ್. ವಾಸುದೇವ್ ಮೂರ್ತಿ, ಮಹಾಜನ ಶಿಕ್ಷಣ ಸಂಸ್ಥೆ, ಜಯಲಕ್ಷ್ಮೀಪುರಂ, ಮೈಸೂರು – ಮಾಜಿ ಶಿಕ್ಷಣ ಮಂಡಳಿ ಸದಸ್ಯರು ಮೈಸೂರು ವಿಶ್ವವಿದ್ಯಾನಿಲಯ ಮೈಸೂರು

ನಂತರ, ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಕುಲಾಧಿಪತಿಗಳಾಗಿದ್ದ ಶ್ರೀ ವಜುಭಾಯಿ ರೂಡಾಭಾಯ್ ವಾಲಾ, ಕುಲಾಧಿಪತಿಗಳು, ರಾಜಭವನ, ಬೆಂಗಳೂರು ಇವರ ಸೇವೆಯನ್ನು ಸ್ಮರಿಸಿ, ಕರ್ನಾಟಕ ರಾಜ್ಯದ ನೂತನ ರಾಜ್ಯಪಾಲರಾಗಿ ನೇಮಕಗೊಂಡಿರುವ ಶ್ರೀ ತಾವರ್‌ಚಂದ್ ಗೆಹ್ಲೋಟ್, ಕುಲಾಧಿಪತಿಗಳು, ರಾಜಭವನ, ಬೆಂಗಳೂರು ಇವರಿಗೆ ಅಭಿನಂದನೆ ಸಲ್ಲಿಸಲಾಯಿತು.

ಹಾಗೂ

ಇದುವರೆವಿಗೂ ಶಿಕ್ಷಣ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡ ಸದಸ್ಯರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1. ಡಾ. ಎನ್.ಎಂ. ತಳವಾರ್, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು, (ವಿಶ್ರಾಂತ) ಕಲಾ ನಿಕಾಯದ ಡೀನರು, ಶಿಕ್ಷಣ ಮಂಡಳಿ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ಪ್ರೊ. ಆರ್. ರಾಜಣ್ಣ, ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು-ಪ್ರಸ್ತುತ ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು.
3. ಡಾ. ಕೆ. ಕೆ. ವಿಶಾಲಾಕ್ಷಿ, ಪ್ರಾಂಶುಪಾಲರು, ಶ್ರೀ ಕಾಗಿನೆಲೆ ಮಹಾಸಂಸ್ಥಾನ, ಕನಕ ಗುರುಪೀಠ ಕಾಲೇಜ್ ಆಫ್ ಎಜುಕೇಷನ್, ಕುವೆಂಪುನಗರ, ಮೈಸೂರು.
4. ಡಾ. ನಾಗರಾಜು, ಪ್ರಾಂಶುಪಾಲರು, ಬಿ.ಜಿ.ಎಸ್. ಶಿಕ್ಷಣ ಕಾಲೇಜು, ಕುವೆಂಪುನಗರ, ಮೈಸೂರು.
5. ಡಾ. ಕೆ.ಟಿ. ಕೃಷ್ಣೇಗೌಡ, ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹಾಸನ.

ಹೊಸದಾಗಿ ಶಿಕ್ಷಣ ಮಂಡಳಿ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಈ ಕೆಳಕಂಡ ಪ್ರಾಧ್ಯಾಪಕರು, ಪ್ರಾಂಶುಪಾಲರುಗಳನ್ನು ಸಭೆಗೆ ಸ್ವಾಗತಿಸಿ ಪರಿಚಯಿಸಲಾಯಿತು.

1. ಡಾ. ಜಿ. ಆರ್. ಜನಾರ್ಧನ್ ಪ್ರಾಧ್ಯಾಪಕರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
2. ಪ್ರೊ. ಮುಝಾಫರ್ ಹೆಚ್ ಅಸ್ಸಾದಿ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು – ಪ್ರಸ್ತುತ ಶಿಕ್ಷಣ ಮಂಡಳಿ ಸದಸ್ಯರು ಇವರು ಕಲಾ ನಿಕಾಯದ ಡೀನರಾಗಿ ನೇಮಕಗೊಂಡಿರುತ್ತಾರೆ.
3. ಡಾ. ಕೆ.ವಿ. ಸುರೇಶ್, ಪ್ರಾಂಶುಪಾಲರು, ಜೆ.ಎಸ್.ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಮೈಸೂರು.
4. ಡಾ. ಜಿ. ಗೋವಿಂದರಾಜು, ಪ್ರಾಂಶುಪಾಲರು, ಮೈಸೂರು ಸಿಟಿ ಮೈನಾರಿಟಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಮೈಸೂರು.
5. ಡಾ. ನಿರ್ಮಲ ಹೆಚ್.ಎಂ, ಪ್ರಾಂಶುಪಾಲರು, ಸೇವಾ ಭಾರತಿ ಪ್ರಥಮ ದರ್ಜೆಕಾಲೇಜು, ಚಾಮರಾಜನಗರ.

ನಂತರ ಕುಲಪತಿಯವರು ಕಾರ್ಯಸೂಚಿಯಂತೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| I.1 | ದಿನಾಂಕ: 07-04-2021ರಂದು ಜರುಗಿದ ಶಿಕ್ಷಣ ಮಂಡಳಿ ಮೂರನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ |
| ತೀರ್ಮಾನ | ದಿನಾಂಕ: 07-04-2021ರಂದು ಜರುಗಿದ ಶಿಕ್ಷಣ ಮಂಡಳಿ ಮೂರನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಗಿದೆ. |
| II.1 | ಪಿಹೆಚ್.ಡಿ ಕೋರ್ಸ್‌ವರ್ಕ್ ತರಗತಿಗಳನ್ನು ಆನ್‌ಲೈನ್‌ನಲ್ಲಿ ನಡೆಸುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, 2020-21ನೇ ಶೈಕ್ಷಣಿಕ ಸಾಲಿನಲ್ಲಿ ನಡೆಯಬೇಕಾಗಿದ್ದ |

| | |
|---|---|
| | ಪಿಹೆಚ್.ಡಿ ಕೋರ್ಸ್‌ವರ್ಕ್ ತರಗತಿಗಳನ್ನು ಕೋವಿಡ್-19 ವೈರಾಣು ಹರಡುತ್ತಿರುವ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಮುಂದೂಡಲಾಗಿತ್ತು. ಈ ಸಂಬಂಧವಾಗಿ ಕೆಲವು ಅಭ್ಯರ್ಥಿಗಳು ತರಗತಿಗಳು ವಿಳಂಬವಾಗುತ್ತಿರುವ ಕಾರಣ ಆನ್‌ಲೈನ್‌ನಲ್ಲಿ ನಡೆಸಬೇಕೆಂದು ಮನವಿ ಸಲ್ಲಿಸಿರುತ್ತಾರೆ. ಈ ಸಂಬಂಧ ಕೋವಿಡ್ ವೈರಾಣು ಕಡಿಮೆಯಾಗುವವರೆಗೆ ಇದೊಂದು ಬಾರಿ ಮಾತ್ರ ಅನ್‌ಲೈನ್‌ನಲ್ಲಿ ತರಗತಿಗಳನ್ನು ನಡೆಸಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದನೆ ನೀಡಬೇಕೆಂದು ತಿಳಿಸಿದರು. |
| ತೀರ್ಮಾನ | ಇದನ್ನು ವಿಶೇಷ ಸಂದರ್ಭವೆಂದು ಪರಿಗಣಿಸಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪಿಹೆಚ್.ಡಿ ಕೋರ್ಸ್‌ವರ್ಕ್ ತರಗತಿಗಳನ್ನು ಈ ಒಂದು ಬಾರಿ ಮಾತ್ರ ಆನ್‌ಲೈನ್‌ನಲ್ಲಿ ನಡೆಸಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| II.2 | "ಬೌದ್ಧ ಅಧ್ಯಯನ ಕೇಂದ್ರ"ವನ್ನು ಸ್ಥಾಪಿಸುವುದರ ಬಗ್ಗೆ. |
| | ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಬೌದ್ಧ ಅಧ್ಯಯನ ಕೇಂದ್ರ"ವನ್ನು ಸ್ಥಾಪಿಸಿ ಸ್ನಾತಕ ಹಂತದಲ್ಲಿ ಬೌದ್ಧ ಅಧ್ಯಯನವನ್ನು ಒಂದು ಐಚ್ಛಿಕ ವಿಷಯವಾಗಿ ಮತ್ತು ಬೌದ್ಧ ಅಧ್ಯಯನದಲ್ಲಿ ಸ್ನಾತಕೋತ್ತರ ಎಂ.ಎ ಪದವಿಯನ್ನು 2021-22ನೇ ಶೈಕ್ಷಣಿಕ ಸಾಲಿನಲ್ಲಿ ಕಾರ್ಯನುಷ್ಠಾನಗೊಳಿಸುವ ಸಂಬಂಧ ಸಿದ್ಧಪಡಿಸಲಾಗಿರುವ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಕಳುಹಿಸಲು ಅನುಮತಿ ನೀಡಲು ಕೋರಿದರು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಬೌದ್ಧ ಅಧ್ಯಯನ ಕೇಂದ್ರ"ವನ್ನು ಸ್ಥಾಪಿಸುವುದರ ಸಂಬಂಧ ಸುದೀರ್ಘವಾಗಿ ಚರ್ಚಿಸಿದ ಸಭೆಯು ಎಲ್ಲಾ ಡೀನರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಿ, ಸಮಿತಿಯು ಸಿದ್ಧಪಡಿಸುವ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಸರ್ಕಾರದ ಅನುಮೋದನೆಗೆ ಕಳುಹಿಸಲು ತೀರ್ಮಾನಿಸಲಾಯಿತು. |
| II.3 | 2020-21ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳು. |
| | 2020-21ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳನ್ನು ಸಿದ್ಧಪಡಿಸಲಾಗಿದ್ದು, ಸರ್ಕಾರಿ ಲೆಕ್ಕ ಪರಿಶೋಧಕರವರಿಂದ ಲೆಕ್ಕ ಪರಿಶೋಧನೆ ಮಾಡುವುದಕ್ಕೆ ಪೂರ್ವಭಾವಿಯಾಗಿ ಹಣಕಾಸು ಸಮಿತಿ, ಸಿಂಡಿಕೇಟ್ ಸಭೆ ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕಾಗಿರುತ್ತದೆ. ಈ ಸಂಬಂಧ ಹಣಕಾಸು ಸಮಿತಿ ಮತ್ತು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆಯೆಂದು ಪ್ರಸ್ತಾಪಿಸುತ್ತಾ, 2020-21ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳನ್ನು ಸಂಕ್ಷಿಪ್ತವಾಗಿ ಕುಲಸಚಿವ (ಪರೀಕ್ಷಾಂಗ)ರವರು ಸಭೆಯಲ್ಲಿ ಮಂಡಿಸಿ, ವಿದ್ಯಾ ವಿಷಯಕ ಪರಿಷತ್ ಸಭೆ ಅನುಮೋದಿಸಬೇಕೆಂದು ತಿಳಿಸಿದರು. |
| ತೀರ್ಮಾನ | 2020-21ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳನ್ನು ಅನುಮೋದಿಸಲಾಯಿತು. |
| II.4 | Conduct of M.Sc (Clinical Embryology and Pre-implantation Genetics) Specialized Programme – Academic year 2018-20 (II & IV Semester Examination) through online. |
| | The Director, Asia Pacific Institute of Embryology, Mysuru in his letter dated 29th May 2021 had requested the Hon'ble Vice-Chancellor, University of mysore, Mysuru for the conduct of the examinations of two semesters of M.Sc. (Clinical Embryology and Pre-implantation Genetics) on |

| | |
|---|---|
| | online for two foreign students who could not come and write the examinations through offline due to covid-19. This subject was placed before the Academic Council meeting for approval. |
| DISICION | APPROVED |
| II.5 | B.Sc (Sp& Hg.) ಮತ್ತು M.Sc. (Sp & Hg.) ಕೋರ್ಸ್‌ಗಳ ಶಿರೋನಾಮೆಯನ್ನು BASLP ಮತ್ತು MASLPಎಂದು ಬದಲಾವಣೆ ಮಾಡಿರುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆಸಲಾಗುತ್ತಿರುವ B.Sc (Sp& Hg.) ಮತ್ತು M.Sc. (Sp& Hg.) ಕೋರ್ಸ್‌ಗಳ ಶಿರೋನಾಮೆಯನ್ನು Rehabilitation Council of India (RCI) ಮತ್ತು ಯುಜಿಸಿ ನಿರ್ದೇಶನದಂತೆ ಪ್ರಾಧಿಕಾರಗಳ ಅನುಮೋದನೆ ಮೇರೆಗೆ BASLP ಮತ್ತು MASLP ಬದಲಾವಣೆ ಮಾಡಿ ದಿನಾಂಕ: 10-06-2015ರಂದು ಅಧಿಸೂಚನೆಯನ್ನು ಹೊರಡಿಸಲಾಯಿತು. ಸದರಿ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ಪಡೆಯಲು ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ 14-08-2015ರಂದು ಸರ್ಕಾರಕ್ಕೆ ಕಳುಹಿಸಲಾಗಿತ್ತು.<br><br>ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ದಿನಾಂಕ: 10-12-2015ರ ಪತ್ರದಲ್ಲಿ ಸದರಿ ಪ್ರಸ್ತಾವನೆಗೆ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಗೊಂಡಿರುವ ನಡವಳಿಯನ್ನು ಕಳುಹಿಸಿಕೊಡಬೇಕೆಂದು ನಿರ್ದೇಶಿಸಿದ್ದ ಹಿನ್ನೆಲೆಯಲ್ಲಿ, ದಿನಾಂಕ: 23-02-2016ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದು ಸರ್ಕಾರಕ್ಕೆ ಅಂಕಿತಕ್ಕಾಗಿ ಕಳುಹಿಸಲಾಗಿತ್ತು. ಆದರೆ, ಇದುವರೆವಿಗೂ ಸರ್ಕಾರದಿಂದ ಯಾವುದೇ ಉತ್ತರ ಬಂದಿರುವುದಿಲ್ಲ. ಆದುದರಿಂದ, Rehabilitation Council of India (RCI) ಮತ್ತು ಯುಜಿಸಿ Specified Course ಗಳ ಪಟ್ಟಿಯಲ್ಲಿ ತಿಳಿಸಿರುವಂತೆ ಮೈಸೂರು ವಿಶ್ವವಿದ್ಯಾನಿಲಯ ನಡೆಸುತ್ತಿದ್ದ B.Sc (Sp& Hg.) ಮತ್ತು M.Sc. (Sp & Hg.) ಕೋರ್ಸ್‌ಗಳ ಶಿರೋನಾಮೆಯನ್ನು BASLP ಮತ್ತು MASLP ಎಂದು ಬದಲಾಯಿಸಿರುವುದಕ್ಕೆ ಸರ್ಕಾರದಿಂದ ಅನುಮತಿ ನೀಡುವಂತೆ ಶಿಫಾರಸ್ಸು ಮಾಡಬೇಕೆಂದು ದಿನಾಂಕ: 17-12-2020ರ ಪತ್ರದಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರಿಗೆ ಪತ್ರ ಬರೆಯಲಾಗಿತ್ತು.<br><br>ಈ ಸಂಬಂಧ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬೆಂಗಳೂರು ಇವರು ದಿನಾಂಕ: 06-02-2021 ಮತ್ತು 22-04-2021 ಗಳಂದು ಮೈಸೂರು ವಿಶ್ವವಿದ್ಯಾನಿಲಯಕ್ಕೆ ರವಾನಿಸಿರುವ ಪತ್ರಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ B.Sc (Sp & Hg.) ಮತ್ತು M.Sc. (Sp & Hg.) ಕೋರ್ಸ್‌ಗಳನ್ನು ನಡೆಸಲು ವಿಶ್ವವಿದ್ಯಾನಿಲಯವು ರಚಿಸಿಕೊಂಡಿರುವ Regulation (ವಿನಿಯಮ)ದಲ್ಲಿ ಬದಲಾವಣೆ ಮಾಡಕೊಳ್ಳಬೇಕಿದ್ದು, ಈ ಬಗ್ಗೆ ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಪಡೆದು ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಿರುವುದರಿಂದ, ವಿದ್ಯಾವಿಷಯಕ ಪರಿಷತ್ ಸಭೆಯು B.Sc (Sp & Hg.) ಮತ್ತು M.Sc. (Sp& Hg.) ಕೋರ್ಸ್‌ಗಳ ಶಿರೋನಾಮೆಯನ್ನು BASLP (Bachelor in Audiology & |

| | |
|---|---|
| | Speech Language Pathology) ಮತ್ತು MASLP (Master in Audiology & Speech Language Pathology) ಎಂದು ಬದಲಾವಣೆ ಮಾಡಿರುವುದನ್ನು ಅನುಮೋದಿಸಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯವು B.Sc (Sp& Hg.) ಮತ್ತು M.Sc. (Sp & Hg.) ಕೋರ್ಸ್‌ಗಳ ಶಿರೋನಾಮೆಯನ್ನು BASLP ಮತ್ತು MASLP ಎಂದು ಬದಲಾವಣೆ ಮಾಡಿ ಹೊರಡಿಸಿರುವ ಅಧಿಸೂಚನೆಯ ಸಂಬಂಧ ವಿನಿಯಮವನ್ನು ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಿಕೊಡಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| II.6 | 2020-21ನೇ ಶೈಕ್ಷಣಿಕ ಸಾಲಿನಲ್ಲಿ ಎಲ್.ಎಲ್.ಎಂ ಕೋರ್ಸಿನ ನಾಲ್ಕನೇ ಸೆಮಿಸ್ಟರ್‌ಗೆ ಪ್ರವೇಶಾತಿ ಮಾಡಿಕೊಳ್ಳಲು ಅನುಮತಿ ನೀಡಿರುವ ಬಗ್ಗೆ ಅನುಸಮರ್ಥನೆಗಾಗಿ. |
| ತೀರ್ಮಾನ | 2020-21ನೇ ಶೈಕ್ಷಣಿಕ ಸಾಲಿಗೆ ಶ್ರೀಮತಿ ಸುಧಾಮಣಿ.ಎನ್ ಎಂಬ ವಿದ್ಯಾರ್ಥಿನಿಗೆ ಎಲ್.ಎಲ್.ಎಂ ಕೋರ್ಸಿನ ನಾಲ್ಕನೇ ಸೆಮಿಸ್ಟರ್‌ಗೆ ವಿಶೇಷ ಪ್ರಕರಣವೆಂದು ಪರಿಗಣಿಸಿ ಮರು ಪ್ರವೇಶಾತಿ ಮಾಡಿಕೊಳ್ಳಲು ಅನುಮತಿ ನೀಡಿರುವುದನ್ನು ಸಭೆಯು ಅನುಸಮರ್ಥಿಸಿತು. |
| III.1 | Specialized ಕೋರ್ಸ್‌ಗಳ ಅಧ್ಯಯನ ಮಂಡಳಿಗಳ ಶಿಫಾರಸ್ಸುಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆ ಬಗ್ಗೆ. |
| ತೀರ್ಮಾನ | 2021-22ನೇ ಶೈಕ್ಷಣಿಕ ಸಾಲಿನಿಂದ ಮೈಸೂರಿನ GETS Academy, ಸಂಸ್ಥೆಯಲ್ಲಿನ 1 B.Com.-Hons. (E-Commerce & Digital Marketing), 2 B.Com.-Hons. (Finance & Investment), 3. B.Com-Hons. (International Accounting & Finance), 4. BBA-Hons. (Business Analytics), 5 BBA-Hons. (Sustainable Development & Environment Management)Û 6. BBA-Hons. (International Business) ಕೋರ್ಸುಗಳ ರೆಗ್ಯುಲೇಷನ್, ಪಠ್ಯಕ್ರಮಗಳು ಮತ್ತು Scheme of Examination ಗಳ ಸಂಬಂಧ ಅಯಾ ಅಧ್ಯಯನ ಮಂಡಳಿಗಳು ನೀಡಿರುವ ಶಿಫಾರಸ್ಸುಗಳನ್ನು, ವಾಣಿಜ್ಯ ನಿಕಾಯದ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ವಿದ್ಯಾವಿಷಯಕ ಸಭೆಯು ಅನುಮೋದಿಸಿತು ಹಾಗೂ ಈ ಸಂಬಂಧ ವಾಣಿಜ್ಯ ನಿಕಾಯದ ವಿಶೇಷ ಸಭೆಯನ್ನು ಕರೆದು ಅಧ್ಯಯನ ಮಂಡಳಿಗಳ ಶಿಫಾರಸ್ಸುಗಳನ್ನು ಅನುಸಮರ್ಥಿಸುವಂತೆ ಸಹ ತೀರ್ಮಾನಿಸಿತು. |

**ಇತರೆ ವಿಷಯಗಳು:**

1. ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣ ಮಂಡಳಿಯ ಮೊದಲನೇ ಸಾಮಾನ್ಯ ಸಭೆಯಲ್ಲಿ ಬುದ್ಧ ಅಧ್ಯಯನ ಕೇಂದ್ರ ಸ್ಥಾಪಿಸುವ ಸಂಬಂಧ ಪ್ರಸ್ತುತದಲ್ಲಿ ಹಿಂದೂಯಿಸಂ ಎಂದರೇನು? ಅದರ ಆಚರಣೆ ಹೇಗೆ? ಎಂಬುದರ ಬಗ್ಗೆ ಇಂದಿನ ಯುವ ಪೀಳಿಗೆಗೆ ತಿಳಿಸುವುದು ಅವಶ್ಯವಾಗಿದೆ. ಈ ಹಿನ್ನಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಿಂದೂಯಿಸಂ ಅಧ್ಯಯನ ಕೇಂದ್ರ ಸ್ಥಾಪಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಆರ್. ಧರ್ಮಸೇನ ಅಭಿಪ್ರಾಯಪಟ್ಟರು.

ಶ್ರೀ.ಸಿ.ಎಸ್.ನಿರಂಜನಕುಮಾರ್, ಮಾನ್ಯ ವಿಧಾನ ಸಭಾ ಸದಸ್ಯರು ಮಾತನಾಡಿ, ಧರ್ಮದ ವಿಚಾರದಲ್ಲಿ ಕೆಲವೊಂದು ಸೂಕ್ಷ್ಮತೆಗಳರಬೇಕಾಗುತ್ತವೆ. ಇಲ್ಲದಿದ್ದರೆ ಜೈನ್, ಸಿಖ್, ಕ್ರೈಸ್ತ ಧರ್ಮಗಳಗೂ ಒಂದೊಂದು ಅಧ್ಯಯನ ಕೇಂದ್ರ ಸ್ಥಾಪಿಸಬೇಕಾಗುತ್ತದೆ ಎಂದು ತಿಳಸಿದರು.

ಇದಕ್ಕೆ ಪೂರಕವಾಗಿ ಮಾತನಾಡಿದ ಪ್ರೊ. ರಮೇಶ್‌ರವರು ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಬೌದ್ಧ ಧರ್ಮ ಅಧ್ಯಯನ ಸ್ವತಂತ್ರ ಕೋರ್ಸ್ ಆಗಿದೆ. ನಮ್ಮಲ್ಲಿ ಆಧ್ಯಯನ ಕೇಂದ್ರ ಸ್ಥಾಪಿಸಲು 'ಬುದ್ದ ದಮ್ಮ' ಎಂದು ನಾಮಕರಣ ಮಾಡಬೇಕು ಎಂದು ಸಲಹೆ ನೀಡಿದರು.

ಪ್ರೊ.ಮುಜಾಫರ್ ಹೆಚ್ ಅಸ್ಸಾದಿರವರು ಮಾತನಾಡಿ, ಪ್ರಸ್ತಾವನೆ ಅಂತಿಮವಾಗುವ ಮುನ್ನ ತಜ್ಞರ ಸಲಹೆ ಪಡೆಯುವುದು ಸೂಕ್ತ ಎಂದು ಸಲಹೆ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಯವರು ಬೌದ್ಧ ಅಧ್ಯಯನಗಳ ಪ್ರಸ್ತಾವನೆಯನ್ನು ತಜ್ಞರು ಪರಿಶೀಲಿಸಿದ ನಂತರ ಸರ್ಕಾರಕ್ಕೆ ಕಳುಹಿಸಲಾಗುವುದು ಎಂದು ತಿಳಸಿದರು. ಮುಂದುವರೆದು ಮಾನ್ಯ ಕುಲಪತಿಯವರು ಬುದ್ಧ ಧಮ್ಮ ಅಧ್ಯಯನ, ಅಂಬೇಡ್ಕರ್ ಅಧ್ಯಯನ ಕೇಂದ್ರದಲ್ಲಿ ನಡೆಯುತ್ತಿದೆ. ಬುದ್ಧ ಅಧ್ಯಯನ ಕೇಂದ್ರ ಸ್ಥಾಪನೆಗೆ ಸರ್ಕಾರದಿಂದ ಅನುದಾನ ಬರುವುದು ತಡವಾಗಲದೆ. ಅಲ್ಲಿಯವರೆಗೂ ಮುನ್ನಡೆಸಲು ಮೈಸೂರು ವಿಶ್ವವಿದ್ಯಾನಿಲಯದಿಂದಲೇ ರೂ.5.00 ಲಕ್ಷಗಳನ್ನು ಮೀಸಲಡಲಾಗಿದೆ. ಸದ್ಯ ಯಾವುದೇ ಅಧ್ಯಯನ ಕೇಂದ್ರಗಳ ಸ್ಥಾಪನೆಗೆ ಆಕ್ಷೇಪವಿಲ್ಲ. ಈ ವಿಷಯವನ್ನು ಡೀನ್ ಅವರ ಸಮಿತಿಯಲ್ಲಿ ಪ್ರಸ್ತಾಪಿಸಿ, ನಂತರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ತಿಳಸಿದರು.

2. ಪ್ರೊ. ರಮೇಶ್, ಡೀನರು, ಕಾನೂನು ನಿಕಾಯ ಮಾತನಾಡಿ Open Elective ವಿಷಯವನ್ನು ಕೇವಲ ಶನಿವಾರದಂದೇ ತರಗತಿಗಳನ್ನು ತೆಗೆದುಕೊಂಡು 2-3 ತಿಂಗಳುಗಳಲ್ಲಿ ಪಠ್ಯಕ್ರಮ ಮುಗಿಸಲು ಆಗುವುದಿಲ್ಲ ಯುಜಿಸಿ ನಿಯಮದ ಪ್ರಕಾರ 6 ತಿಂಗಳು ತರಗತಿಗಳನ್ನು ನಡೆಸಬೇಕು, ಸಾಧ್ಯವಾಗದಿದ್ದಲ್ಲಿ ಕೇವಲ 4 ತಿಂಗಳಾದರೂ ತರಗತಿಗಳನ್ನು ತೆಗೆದುಕೊಳ್ಳಬೇಕು ಆದುದರಿಂದ ಶುಕ್ರವಾರವೂ ಸಹ ತರಗತಿಗಳನ್ನು ತೆಗೆದುಕೊಳ್ಳಲು ಅವಕಾಶ ಸಿಗಬಹುದೇ ಅಥವಾ online ನಲ್ಲಿ ತೆಗೆದುಕೊಳ್ಳುವುದೇ? ಏಕೆಂದರೆ ಯುಜಿಸಿ ನಿಯಮಾನುಸಾರ 6 ತಿಂಗಳು ತರಗತಿಗಳನ್ನು ತೆಗೆದುಕೊಳ್ಳಬೇಕಾಗಿರುವುದರಿಂದ ಯಾರಾದರೂ ಪ್ರಶ್ನಿಸಿದರೆ ಕೋರ್ಸ್‌ವರ್ಕ್ ಮಾಡಿರುವುದೆಲ್ಲ ಅಮಾನ್ಯವಾಗಬಹುದು ಎಂದು ನನ್ನ ಅನುಮಾನವೆಂದು ತಮ್ಮ ಅಭಿಪ್ರಾಯ ತಿಳಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, 2020-21ನೇ ಸಾಲಿನಲ್ಲಿ ನಡೆಯಬೇಕಿದ್ದ ಪಿಹೆಚ್.ಡಿ ಕೋರ್ಸ್‌ವರ್ಕ್ ತರಗತಿಗಳನ್ನು ಕೋವಿಡ್-19 ಹಿನ್ನಲೆಯಲ್ಲಿ ತಾತ್ಕಾಲಿಕವಾಗಿ ಮುಂದೂಡಲಾಗಿತ್ತು, ಆದರೆ, ತರಗತಿಗಳು ವಿಳಂಬವಾಗುತ್ತಿದ್ದ ಕಾರಣ ಕೆಲವು ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ನಡೆಸಲು ಕೋರಿದ್ದರು. ಅಲ್ಲದೆ ವಿದೇಶಿ ವಿದ್ಯಾರ್ಥಿಗಳು ಆಫ್‌ಲೈನ್ ತರಗತಿಗಳಗೆ ಹಾಜರಾಗಲು ಸಾಧ್ಯವಾಗಿಲ್ಲದಿರುವುದರಿಂದ ವಿಶೇಷ ಸಂದರ್ಭವೆಂದು ಪರಿಗಣಿಸಿ, ಪ್ರಸಕ್ತ ವರ್ಷಕ್ಕೆ ಮಾತ್ರ ಆನ್‌ಲೈನ್‌ನಲ್ಲಿ ಪಿಹೆಚ್.ಡಿ ಕೋರ್ಸ್‌ವರ್ಕ್ ನಡೆಸಲಾಗುವುದು. ಜೊತೆಗೆ ಆಫ್‌ಲೈನ್ ತರಗತಿಗಳು ಅಭ್ಯರ್ಥಿಗಳಗೆ ಲಭ್ಯವಿರಲದೆ ಎಂದು ಸಭೆಗೆ ತಿಳಸಿದರು.

3. ಪ್ರೊ.ಮುಜಫರ್ ಹೆಚ್ ಅಸ್ಸಾದಿರವರು ಮಾತನಾಡಿ CET ಕೋರ್ಸ್‌ನಲ್ಲಿ ಸಂಶೋಧನಾ ವಿಧಾನ ಪತ್ರಿಕೆ ಹಾಗೂ ಸಮಾಜ ವಿಜ್ಞಾನಕ್ಕೆ ಒಂದೇ ರೀತಿಯ ವಿಷಯವೆಂದು ಎಲ್ಲಾ ವಿಭಾಗಗಳಲ್ಲೂ ಒಂದೇ ರೀತಿ ಇರಲು ತಿದ್ದುಪಡಿ ಮಾಡಬೇಕೆಂದು ತಿಳಸಿದರು.

ಮಾನ್ಯ ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡಿ, ಮಾನ್ಯ ಕುಲಪತಿಗಳು ಈಗಾಗಲೇ ಒಂದು ಸಮಿತಿ ರಚಿಸಲಾಗಿದ್ದು ಪಿಹೆಚ್.ಡಿ ರೇಗ್ಯುಲೇಷನ್‌ನಲ್ಲಿ ಕೆಲವು ನ್ಯೂನತೆಗಳಿರುವುದರಿಂದ ಎಲ್ಲಾ ಹಿರಿಯ ಪ್ರಾಧ್ಯಾಪಕರುಗಳ ಅಭಿಪ್ರಾಯ ತೆಗೆದುಕೊಂಡು 2017ರ ಪಿಹೆಚ್.ಡಿ ರೇಗ್ಯುಲೇಷನ್‌ನಲ್ಲಿ ತಿದ್ದುಪಡಿ ಮಾಡುವುದಾಗಿ ಸಭೆಗೆ ತಿಳಿಸಿದರು.

4. ಪ್ರೊ. ಅಯ್ಯಣ್ಣ ರವರು ಮಾತನಾಡಿ ಸಂಶೋಧನಾ ವಿಧಾನ ವಿಷಯವು ಶೇ.50% ವಿಷಯಗಳಿಗೆ ಒಂದೇ ರೀತಿ ಆಗಿದ್ದರೂ ಉಳಿದ ಶೇ.50% ವಿಷಯಗಳಿಗೆ ಒಂದೆ ರೀತಿ ಇರುವುದಿಲ್ಲ ಅಭಿವೃದ್ಧಿ ಅಧ್ಯಯನ, ಅರ್ಥಶಾಸ್ತ್ರಗಳಂತಹ ಕೆಲವು ವಿಷಯಗಳಲ್ಲಿ Field work ಇರುತ್ತದೆ. ಆದುದರಿಂದ, ಆಯಾಯ ವಿಷಯಗಳಿಗೆ ಬಿಡುವುದು ಒಳ್ಳೆಯದೆಂದು ತಮ್ಮ ಅಭಿಪ್ರಾಯ ತಿಳಿಸಿದರು. ಇದಕ್ಕೆ ಪ್ರೊ. ಜಿ.ಆರ್. ಜನಾರ್ಧನ್ ರವರು ಧನಿಗೂಡಿಸಿ ಪ್ರೊ. ಅಯ್ಯಣ್ಣನವರು ಹೇಳಿದಂತೆ ಸಂಶೋದನಾ ವಿಧಾನ ಶೇ.50% ಒಂದೇ ಆಗಿರಲಿ ಉಳಿದ ಶೇ.50% ಅನ್ನು ಆಯಾಯ ವಿಭಾಗದವರಿಗೆ ಸೇರ್ಪಡೆ ಮಾಡಿಕೊಳ್ಳಲು ತಿಳಿಸುವುದು ಸೂಕ್ತವೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಹೆಚ್ಚುವರಿಯಾಗಿ ಇಎಂಆರ್‌ಸಿ ಮುಖಾಂತರ ವೆಬಿನಾರ್‌ಗಳ ಮುಖಾಂತರ ಎಲ್ಲಾ ಸಂಶೋಧಕರಿಗೆ ಒಂದು ಓರಿಯೆಂಟೇಷನ್ ಕಾರ್ಯಕ್ರಮ ಮಾಡುವುದಾಗಿ ಸಭೆಗೆ ತಿಳಿಸಿದರು.

5. With reference to the constitution of Interdisciplinary Board for Guide Recognition under the Faculty of Science and Technology Dr.Venkatesh Kumar suggested to include all deans in the Interdisciplinary Board for Guide Recognition under the Faculty of Science and Technology.

Hon'ble Vice-Chancellor accepted the suggestion and said that the revised Board would be constituted including all the deans.

6. Institute of Development Studies statutes does not include commerce faculty subjects. But Agri-Business programme running under IDS, it should be shifted to Commerce faculty.

Vice-Chancellor accepted and said that soon the committee will be formed in this regard.

7. ಶ್ರೀ. ನಿರಂಜನ್ ಕುಮಾರ್, ಮಾನ್ಯ ವಿಧಾನ ಸಭಾ ಸದಸ್ಯರು ತೆರಕಣಾಂಬಿ ಕಾಲೇಜಿನ ಪ್ರವೇಶಾತಿಯ ಬಗ್ಗೆ ಪ್ರಸ್ತಾಪಿಸಿದರು. ಇದಕ್ಕೆ ಮಾನ್ಯ ಕುಲಪತಿಗಳು ಈ ವಿಷಯವನ್ನು ಶೈಕ್ಷಣಿಕ ವಿಭಾಗದವರಿಗೆ ವಹಿಸಿದೆ. ಇನ್ನು 15 ದಿನಗಳ ನಂತರ ಪ್ರವೇಶಾತಿ ಪ್ರಾರಂಭ ಮಾಡುವುದಾಗಿ ಸಭೆಗೆ ತಿಳಿಸಿದರು.

ಕೊನೆಯಲ್ಲಿ ಮಾನ್ಯ ಕುಲಪತಿಗಳು ಸಭೆಯಲ್ಲಿ ಭಾಗವಹಿಸಿದಂತಹ ಸದಸ್ಯರುಗಳಿಗೆ ಹಾಗೂ ಪ್ರೊ. ಎಸ್. ಆರ್. ನಿರಂಜನ್, ವಿಶ್ರಾಂತ ಕುಲಪತಿಗಳು, ಶಿಕ್ಷಣ ಮಂಡಳಿ ಸದಸ್ಯರು ದಿನಾಂಕ: 31-07-2021ರಂದು ಮೈಸೂರು ವಿಶ್ವವಿದ್ಯಾನಿಲಯದ ಸೇವೆಯಿಂದ ವಯೋನಿವೃತ್ತಿ ಹೊಂದುತಿರುವುದರಿಂದ ಇವರಿಗೆ ಶುಭಾಹಾರೈಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳ್ಳಸಲಾಯಿತು.

| | |
|---|---|
| ಸಹಿ/- | ಸಹಿ/- |
| ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ | ಕುಲಪತಿ ಮತ್ತು ಅಧ್ಯಕ್ಷರು |